ಶ್ರೀ ಕಡಿದಾಳ್ ಮಂಜಪ್ಪ.—ಮಂತ್ರಿಗಳು ಇಡೀ ದೇಶವನ್ನು ಪ್ರತಿನಿಧಿಸುವುದರಿಂದ ದೇಶದ ವಿದ್ಯಮಾನ ವನ್ನೆಲ್ಲಾ ಗಮನಿಸಿ ತೀರ್ಮಾನ ಮಾಡುತ್ತೇವೆ.

ಶ್ರೀ ಟಿ. ಹನುಮಯ್ಯ.—ದೇಶವನ್ನೆಲ್ಲಾ ಪ್ರತಿನಿಧಿಸುವುದಾದರೆ ಒಂದೇ ಸಬ್-ಡಿವಿಜ಼ನ್‌ನಲ್ಲಿ ನಾಲ್ಕು ಏಕೆ ಕೊಟ್ಟಿರಿ ?

ಶ್ರೀ ಕಡಿದಾಳ್ ಮಂಜಪ್ಪ.—ಕಂಟಿಗ್ಯೂಯಟಿ ಪ್ರಿಕ್ಸಿಪಲ್ ಮೇರೆ ಮತ್ತು ಯಾವ ಸ್ಥಳಗಳಲ್ಲಿ ಈ ಬ್ಲಾಕುಗಳನ್ನು ಯಶಸ್ವಿಯಾಗಿ ನಡೆಸಬಹುದು ಇವೇ ಮುಂತಾದ ಆಧಾರಗಳನ್ನು ಗಮನಿಸಿ ತೀರ್ಮಾನ ಮಾಡಿದ್ದೇವೆ.

ಶ್ರೀ ಟಿ. ಹನುಮಯ್ಯ.—ಯಾವ್ಯಾವ ಆಧಾರಗಳ ಮೇರೆ ವಿಲೇವಾರಿ ಮಾಡಿದ್ದೀರಿ, ಸನ್ನಿವೇಶ ಎಂಥಾದ್ದು ಎಂಬುದನ್ನು ದಯವಿಟ್ಟು ತಿಳಿಸುತ್ತೀರಾ ?

ಅಧ್ಯಕ್ಷರು.—830ನೆಯ (*c*) ಪ್ರಶ್ನೆಗೆ ಉತ್ತರ ಕೊಟ್ಟಿರುವುದರಲ್ಲಿ ಅದನ್ನು ತಿಳಿಸಿದೆ.

ಶ್ರೀ ಟಿ. ಹನುಮಯ್ಯ.—ಈ ಉತ್ತರದಲ್ಲಿ ಆ ಸನ್ನಿವೇಶ-ವಿದ್ಯಮಾನ ಇತ್ಯಾದಿಗಳ್ಯಾವುವನ್ನೂ ತಾವು ತಿಳಿಸಿಲ್ಲ ಕಾರಣವೇನು ?

Sri Kadidal MANJAPPA.—I have already answered. It is "contiguity". ನಾನು ತಮಗಾಗಲೇ ಉತ್ತರ ಕೊಟ್ಟಿದ್ದೇನೆ.

ಶ್ರೀ ಟಿ. ಹನುಮಯ್ಯ.—ನಾನು ಕೇಳಿರತಕ್ಕ ಅಂತ ಗಳಿಗೆ ಅದರಲ್ಲಿ ಉತ್ತರವಿಲ್ಲ.

ಶ್ರೀ ಕಡಿದಾಳ್ ಮಂಜಪ್ಪ.—ಒಂದಕ್ಕೊಂದಕ್ಕೆ ಪರಸ್ಪರ ಹೊಂದಾವಣಿಕೆಯಾಗತಕ್ಕ ಸನ್ನಿವೇಶಗಳಿರ ಬೇಕೆಂಬುದು ಒಂದು ತತ್ವ. ಈ ಯೋಜನೆಯ ಕೆಲಸ ಕಾರ್ಯಗಳು ಯಶಸ್ವಿಯಾಗಿ ಜರುಗಲು ಸೂಕ್ತ ಕಾರ್ಯ ಕ್ರಮಗಳನ್ನು ಕೈಗೊಳ್ಳಲು ಅಲ್ಲಿ ಸರಿಯಾದ ಸನ್ನಿವೇಶ ಗಳಿರಬೇಕು ಎಂಬುದು ಮತ್ತೊಂದು ತತ್ವ.

ಶ್ರೀ ಎಚ್. ಎಂ. ಚೆನ್ನಭಸಪ್ಪ.—ಒಂದೇ ಸಬ್ ಡಿವಿಜ಼ನ್‌ನಲ್ಲಿ ಒಂದೆರಡು ಬ್ಲಾಕುಗಳನ್ನು ಮಂಜೂರು ಮಾಡಿರುವುದಕ್ಕೆ ಕಾರಣವಿಷ್ಟೆ. ಮೊದಲು ಹರಿಹರ ದಾವಣಗೆರೆ ತಾಲ್ಲೂಕುಗಳಲ್ಲಿ N.E.S. ಬ್ಲಾಕು ಗಳನ್ನು ಪ್ರಾರಂಭಿಸಿದಾಗ ಅಕ್ಕಪಕ್ಕದಲ್ಲಿ ಇದ್ದಂಥಾ ಕೆಲವು ಹಳ್ಳಿಗಳನ್ನು ಕೈಬಿಡಲಾಗಿದ್ದಿತು, ಹಾಗೆ ಆ ಹಳ್ಳಿಗಳನ್ನು ಕೈಬಿಟ್ಟುಕೊಂಡು ಅಲ್ಲಿಯ ಆಡಳಿತ ವನ್ನು ನಡೆಸಲು ಬಹಳ ಕಷ್ಟವಾಗಿತ್ತು. ಆ ಕಾರಣ ದಿಂದ ಆ ಹಳ್ಳಿಗಳನ್ನೂ ಸೇರಿಸಿದರೆ ಹೆಚ್ಚು ಅನುಕೂಲ ವಾಗುತ್ತದೆಂದು ಕಂಡು ಬಂದುದರಿಂದ ಈಚೆಗೆ ಆ ಹಳ್ಳಿಗಳನ್ನೆಲ್ಲಾ ಆ ಬ್ಲಾಕಿಗೆ ಸೇರಿಸಲಾಯಿತು. ಅಷ್ಟೇ ಹೊರತು ಅಂಥ ತಾರತಮ್ಯವೇನೂ ಆಗಿಲ್ಲ.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಆ ಚಿಕ್ಕಮಗ ಳೂರು ಜಿಲ್ಲೆಗೆ ನ್ಯಾಯವಾಗಿ ಎಷ್ಟು ಕೊಟಾ ದೊರೆಕ ಬೇಕಾಗಿತ್ತೋ ಅಷ್ಟು ದೊರೆಯದಿರಲು ಕಾರಣವೇನು ?

ಶ್ರೀ ಕಡಿದಾಳ್ ಮಂಜಪ್ಪ.—ಆ ಜಿಲ್ಲೆಗೆ ನ್ಯಾಯ ವಾಗಿ ಎಷ್ಟು ದೊರೆಕಬೇಕಾಗಿತ್ತೋ ಅಷ್ಟನ್ನೂ ದೊರೆ ಕಿಸಿ ಕೊಡಲಾಗಿದೆ.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಪ್ರತಿಯೊಂದು ಜಿಲ್ಲೆಗೂ 3-4 ಬ್ಲಾಕುಗಳನ್ನು ಕೊಟ್ಟು ನಮ್ಮ ಜಿಲ್ಲೆಗೆ ಮಾತ್ರ ಏಕೆ ಕೇವಲ ಎರಡು ಬ್ಲಾಕುಗಳನ್ನು ಮಾತ್ರವೇ ಕೊಡಲಾಗಿದೆ ?

ಶ್ರೀ ಕಡಿದಾಳ್ ಮಂಜಪ್ಪ.—ಸರ್ಕಾರದವರು ಇತ್ತೀಚೆಗೆ ಬಹು ಪ್ರಾಮುಖ್ಯವಾಗಿ ಗಮನಕ್ಕೆ ತೆಗೆದು ಕೊಂಡಿರುವ ವಿಷಯ ಯಾವುದೆಂದರೆ, ಯಾವ ಯಾವ ಜಿಲ್ಲೆಯಲ್ಲಿ ಎಷ್ಟೆಷ್ಟು ಜನ ಸಂಖ್ಯೆಯಿದೆ ಎಂಬುದನ್ನು ಗಣನೆಗೆ ತೆಗೆದುಕೊಂಡು ಆ ಪ್ರಜಾ ಸಂಖ್ಯೆಗನುಗುಣ ವಾಗಿ ಮಾಡಲಾಗಿದೆ. ಉದಾಹರಣೆಗಾಗಿ ತಮಗೆ ಹೇಳಬೇಕೆಂದರೆ, ತಾವು ಬೆಂಗಳೂರು ಜಿಲ್ಲೆಗೆ ಜಾಸ್ತಿ ಆಯಿತೆಂದು ಭಾವಿಸಿರಬಹುದು. ಆದರೆ ಬೆಂಗಳೂರು ಜಿಲ್ಲೆಯಲ್ಲಿ ಒದಗಿಸಲಾಗಿರುವ ಬ್ಲಾಕುಗಳೂ ಆ ಜಿಲ್ಲೆಯ ಪ್ರಜಾ ಸಂಖ್ಯೆಗೆ ಸೇಕಡ 16 ರಂತೆ ಇದೆ. ತುಮಕೂರು ಜಿಲ್ಲೆಗೆ ಸೇಕಡ 18ರ ಪ್ರಕಾರವೂ ಹಾಸನ ಜಿಲ್ಲೆಗೆ ಸೇಕಡ 22ರ ಪ್ರಕಾರವೂ, ಮೈಸೂರು ಜಿಲ್ಲೆಗೆ ಸೇಕಡ 22ರ ಪ್ರಕಾರವೂ ಚಿತ್ರ ದುರ್ಗ ಜಿಲ್ಲೆಗೆ ಸೇಕಡ 24 ರಂತೆಯೂ ಕೊಲಾರ ಜಿಲ್ಲೆಗೆ ಸೇಕಡ 24 ರಂತೆಯೂ, ಬಳ್ಳಾರಿ ಜಿಲ್ಲೆಗೆ ಸೇಕಡ 30 ರಂತೆಯೂ, ಚಿಕ್ಕಮಗಳೂರು ಜಿಲ್ಲೆಗೆ ಸೇಕಡ 32 ರಂತೆಯೂ, ಮಂಡ್ಯ ಜಿಲ್ಲೆಗೆ ಸೇಕಡ 30 ರಂತೆಯೂ, ಶಿವಮೊಗ್ಗಾ ಜಿಲ್ಲೆಗೆ ಸೇಕಡ 36 ರಂತೆಯೂ ಒದಗಿಸಲಾಗಿದೆ. ಇನ್ನು ಮುಂದೆ ಉಳಿದ ಜಿಲ್ಲೆಗೆ ಕೊಡಲಾಗುತ್ತದೆ.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಚಿಕ್ಕಮಗ ಳೂರು ಜಿಲ್ಲೆಗೆ ಸೇಕಡ 30 ರಷ್ಟು ಜನರಿಗೆ ಮಾತ್ರ ಅನುಕೂಲವಾಗಿರುವುದರಿಂದ ಈ ಮಲೆನಾಡು ಪ್ರಾಂತ್ಯಕ್ಕೆ ಹೆಚ್ಚಿನ ರಿಯಾಯಿತಿಗಳನ್ನು ತೋರಿಸ ದಿರಲು ಕಾರಣವೇನು ?

ಶ್ರೀ ಕಡಿದಾಳ್ ಮಂಜಪ್ಪ.—ಮಲೆನಾಡು ಪ್ರದೇಶ ವೆಂದೇ ಅಲ್ಲಿಗೆ ಈಗ ಎರಡು ಬ್ಲಾಕುಗಳನ್ನು ಕೊಟ್ಟಿದ್ದೇವೆ.

ಶ್ರೀಮತಿ ಬಿ ಎಲ್. ಸುಬ್ಬಮ್ಮ.—ಈ ರೀತಿಯ ಸೌಲಭ್ಯಗಳನ್ನು ತಾವು ಕೇವಲ ಅಲ್ಲಿ 5-6 ಹೋಬಳಿ ಗಳವರಿಗೆ ಮಾತ್ರವೇ ಒದಗಿಸಿ ಇನ್ನುಳಿದ ಹೋಬಳಿ ಗಳಿಗೆ ಅನುಕೂಲ ಕಲ್ಪಿಸಿ ಕೊಡದಿದ್ದರೆ ಆ ಜನರಲ್ಲಿ ಒಂದು ಭಿನ್ನಾಭಿಪ್ರಾಯ ಮೂಡುವುದಕ್ಕೆ ಅವಕಾಶ ವಾಗುವುದಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಈ ಯೋಜನೆಯೇನೂ ಇಲ್ಲಗೇ ಮುಗಿಯಲಲ್ಲ. ಈ ಪಾಲಿಸಿಯಿನ್ನೂ ಮುಂದು ವರಿಸಿಕ್ಕೊಂಡು ಹೋಗತಕ್ಕದ್ದಾಗಿದೆ. ಆದಕಾರಣ ನಾವೀಗ ಮಲೆನಾಡು ವಿಚಾರವನ್ನು ಕೈಬಿಟ್ಟಿಲ್ಲ. ನಮ್ಮ ಗಮನದಲ್ಲಿಟ್ಟು ಕೊಂಡೇಇದ್ದೇವೆ.

Mysore Government Road Transport Buses.

Q.—656. Sri V. M. MASCARENHAS (St. John's Hill).—

Will the Government be pleased to state :—

(*a*) the number of buses owned by the Mysore Government Road Transport on 1st September 1956 ;

(*b*) the number actually running ?

A.—Sri H. SIDDAVEERAPPA (Minister for Home and Finance.)—

(*a*) 245.

(*b*) 196.

Sri V. M. MASCARENHAS.—May I know whether the remaining 49 vehicles are unserviceable ?

*Sri H. SIDDAVEERAPPA.—Out of the remaining 49, 25 are in the workshop for repairs and 24 are condemned.

Sri R. MUNISWAMIAH.—Are there standing seats in some of these buses ?

Mr. SPEAKER.—That question does not arise here.

Mysore Iron and Steel Works

(Revision of pay of Labour)

Q.—662. Sri B. MADHAVACHAR (Bhadravati).—

Will the Government be pleased to state :—

(*a*) whether they have received representation from the Labour Associations for effecting revision in the pay of workers employed in the Mysore iron and Steel Works ;

(*b*) in how many cases of daily rated and monthly rated employees maximum of their grades of pay has been reached ;

(*c*) the period of stagnation in respect of such employees ?

A.—Sri H. SIDDAVEERAPPA (Minister for Home and Finance.)—

(*a*) Yes.

(*b*)

Daily rated employees.	*Monthly rated employees.*
242	207

(*c*) The following statement furnishes the information :—

Maximum grade pay reached in	*Monthly rated employees.*	*Daily rated employees.*
1948 ...	...	1
1949 ...	3	4
1950 ...	6	9
1951 ...	42	14
1952 ...	29	5
1953 ...	34	65
1954 ...	46	57
1955 ...	47	87
Total ...	207	242

ಶ್ರೀ ಬಿ. ಮಾಧವಾಚಾರ್.—ನೂತನ ಪ್ರಾಂತ್ಯಗಳ ರಚನೆಯಾದ ಮೇಲೆ ಈಗ ಸರ್ಕಾರದವರ ಆಡಳಿತಕ್ಕೊಳಪಟ್ಟ ಕೆಲವು ಮಾಡುತ್ತಿರುವ ಕೈಗಾರಿಕಾ ಸಂಸ್ಥೆಗಳ ನೌಕರರ ಸಂಬಳ ಸಾರಿಗೆಗಳನ್ನು ಹೆಚ್ಚಿಸಲು ತಾವೇನಾದರೂ ಆಲೋಚನೆ ಮಾಡಿದ್ದೀರಾ ?

*ಶ್ರೀ ಎಚ್. ಸಿದ್ದವೀರಪ್ಪ.—ಹಾಗೇನೂ ಪ್ರತ್ಯೇಕವಾಗಿ ಈ ಫ್ಯಾಕ್ಟರಿಗಳವರ ವಿಚಾರದಲ್ಲಿ ಆಲೋಚನೆ ಮಾಡಿಲ್ಲ.

ಶ್ರೀ ಬಿ. ಮಾಧವಾಚಾರ್.—ಅದನ್ನು ಮಾಡಬೇಕಾದದ್ದು ಆವಶ್ಯಕವೆಂದು ಹೇಳಿದರೆ ತಾವು ಅದನ್ನು ಒಪ್ಪುತ್ತೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ಈ ವಿಚಾರವಾಗಿ ಏನು ಮಾಡಬೇಕೆಂಬುದರ ಬಗ್ಗೆ, ಮಾನ್ಯ ಸದಸ್ಯರಿಗೆ ಗೊತ್ತಿರುವ ಹಾಗೆ, ಇದೇ ತಿಂಗಳು 5ನೆಯ ತಾರೀಖಿನಲ್ಲಿ ಆ ಭದ್ರಾವತಿ ಕಾರ್ಖಾನೆಯಲ್ಲಿ ನಡೆದ ಮೀಟಿಂಗಿನಲ್ಲಿ ಒಂದು ತೀರ್ಮಾನ ತೆಗೆದುಕೊಂಡಿದೆ.

ಶ್ರೀ ಬಿ. ಮಾಧವಾಚಾರ್.—ಆ ತೀರ್ಮಾನವನ್ನು ಕಾರ್ಯಗತ ಮಾಡುವುದಕ್ಕೆ ತಾವೇನು ಕಾರ್ಯಕ್ರಮಗಳನ್ನು ಕೈಗೊಂಡಿದ್ದೀರಿ ?

ಶ್ರೀ ಎಚ್. ಸಿದ್ದವೀರಪ್ಪ.—ತಮ್ಮ ಪ್ರತಿವಾದಿಗಳಿಂದ ಏನುನವಾಲು ಬರುತ್ತದೆ ಎನ್ನುವುದನ್ನು ನಾವೀಗ ಕಾದು ನೋಡುತ್ತಿದ್ದೇವೆ.

ಶ್ರೀ ಬಿ. ಮಾಧವಾಚಾರ್.—ಆ ರೀತಿ ನವಾಲಿಗೆ ತಕ್ಕ ಜವಾಬನ್ನು ಕೊಡಬೇಕೆಂಬ ಮನೋಭಾವ ನರಿಯಾದುದೇ ?

ಶ್ರೀ ಎಚ್. ಸಿದ್ದವೀರಪ್ಪ.—ಅದನ್ನು ಕಾದು ನೋಡಬೇಕಾದದ್ದು ನಮ್ಮ ಜವಾಬ್ದಾರಿ.

Sri K. S. VASAN.—From the answer given to (*c*) does it not reveal that revision or upgrading of pay of these employees is called for immediately ?

Sri H. SIDDAVEERAPPA.—Generally I am in sympathy with the view that something will have to be done.

Sri K. S. VASAN.—Have the employees concerned asked for adjudication of the dispute regarding the wage revision ?

Sri H. SIDDAVEERAPPA.—I am not aware of that.

Sri D. VENKATESH.—What is the basis on which the wages are fixed in Bhadravati Iron Works ?

Sri H. SIDDAVEERAPPA.—It is a very difficult question to answer on what basis we have done. Generally one of the points that will have to be taken into consideration is the living index cost of.

Sri D. VENKATESH.—Will the Government atleast now revise the wage structure on the basis of efficiency?